ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಶಿವಮೊಗ್ಗ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಶಿವಮೊಗ್ಗ, 577201. ಶಿವಮೊಗ್ಗ ಜಿಲ್ಲೆ
e-mail :dhoshimoga@gmail.com fax.08182-223891 phone: 08182-222382

ಸಂ.ಜಿಆಕುಕಶಿ/ಸಿ.ವಿ.(1)ವಿವ/43/2021-22 ದಿನಾಂಕ:04/12/2023

## ಅಧಿಕೃತ ಜ್ಞಾಪನಾ ಪತ್ರ

**ವಿಷಯ:** ಸಾರ್ವಜನಿಕ ಆಸ್ಪತ್ರೆ ಸೊರಬ ಇಲ್ಲಿನ ಜನರಲ್ ಮೆಡಿಸಿನ್ ತಜ್ಞ ವೈದ್ಯರ ಹುದ್ದೆಗೆ ತಾತ್ಕಾಲಿಕ ಕಾರ್ಯಹೊಂದಾಣಿಕೆ ಮಾಡಿರುವ ಬಗ್ಗೆ.

<><><><>

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಾರ್ವಜನಿಕ ಆಸ್ಪತ್ರೆ ಸೊರಬ ಇಲ್ಲಿ ಫಿಜಿಷಿಯನ್ ತಜ್ಞರ ಹುದ್ದೆ ಧೀರ್ಘಾವಧಿಯಿಂದ ಖಾಲಿ ಇದ್ದು ಇದರಿಂದಾಗಿ ಈ ತಜ್ಞತೆಯ ಸೇವೆ ಆ ಭಾಗದ ಸಾರ್ವಜನಿಕರಿಗೆ ಒದಗುತ್ತಿಲ್ಲವೆಂದು ಪ್ರಯುಕ್ತ ತಾತ್ಕಾಲಿಕವಾಗಿ ಪರ್ಯಾಯ ವ್ಯವಸ್ಥೆ ಮಾಡಲು ಸ್ಥಳೀಯ ಜನ ಪ್ರತಿನಿಧಿಗಳು ಆಗ್ರಹಿಸಿರುತ್ತಾರೆ.

ಪ್ರಾಥಮಿಕ ಆರೋಗ್ಯ ಕೇಂದ್ರ ಶಿರವಂತೆ, ಸಾಗರ ತಾಲ್ಲೂಕು ಇಲ್ಲಿ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಡಾ॥ ಭರತ್ ಎಸ್ ಎನ್, ವೈದ್ಯಾಧಿಕಾರಿಗಳು, ಇವರು ಫ್ಯಾಮಿಲಿ ಮೆಡಿಸಿನ್ ವಿಭಾಗದಲ್ಲಿ ಡಿ.ಎನ್.ಬಿ ಸ್ನಾತಕೋತ್ತರ ವ್ಯಾಸಂಗವನ್ನು ಪೂರೈಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿಯವರ ತಜ್ಞತೆಯ ಸೇವೆಯನ್ನು ಬಳಸಿಕೊಳ್ಳಲು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ಶಿರವಂತೆ ಇಲ್ಲಿನ ಹೊರರೋಗಿ ಚಿಕಿತ್ಸೆಗಾಗಿ ಕೆಳಕಂಡಂತೆ ಕಾರ್ಯಹೊಂದಾಣಿಕೆ ಮಾಡಿ ಆದೇಶಿಸಿದೆ.

| ಕ್ರಮ ಸಂಖ್ಯೆ | ಕಾರ್ಯಹೊಂದಾಣಿಕೆ ಮಾಡಿರುವ ವೈದ್ಯರ ಹೆಸರು, ಹುದ್ದೆ ಹಾಗು ಸಂಸ್ಥೆ | ಕಾರ್ಯಹೊಂದಾಣಿಕೆ ಮಾಡಿ ಆದೇಶಿಸಿದ ಹುದ್ದೆ ಹಾಗೂ ಸಂಸ್ಥೆ |
|---|---|---|
| 01 | ಡಾ॥ ಭರತ್ ಎಸ್ ಎನ್, ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ ಶಿರವಂತೆ, ಸಾಗರ ತಾಲ್ಲೂಕು | ಸಾರ್ವಜನಿಕ ಆಸ್ಪತ್ರೆ ಸೊರಬ ಇಲ್ಲಿ ಖಾಲಿ ಇರುವ ಜನರಲ್ ಮೆಡಿಸಿನ್ ಹುದ್ದೆಗೆ (ಪೂರ್ಣ ಪ್ರಮಾಣದಲ್ಲಿ) |
| 02 | ಡಾ॥ ಸೈಯದ್ ಮೊಹಮದ್, ಗುತ್ತಿಗೆ ಆಯುಷ್ ವೈದ್ಯಾಧಿಕಾರಿಗಳು(ಎನ್ ಹೆಚ್ ಎಂ) ಸಮುದಾಯ ಆರೋಗ್ಯ ಕೇಂದ್ರ ಆನಂದಪುರ ಸಾಗರ ತಾಲ್ಲೂಕು | ಪ್ರಾಥಮಿಕ ಆರೋಗ್ಯ ಕೇಂದ್ರ ಶಿರವಂತೆ ಸಾಗರ ತಾಲ್ಲೂಕು (ಪೂರ್ಣ ಪ್ರಮಾಣದಲ್ಲಿ) |

ಈ ಕಾರ್ಯಹೊಂದಾಣಿಕೆಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ, ತಾತ್ಕಾಲಿಕವಾಗಿ ಮುಂದಿನ ಆದೇಶದವರೆಗೆ ಸಾರ್ವಜನಿಕ ಆಸ್ಪತ್ರೆ ಸೊರಬ ಇಲಿನ ಜನರಲ್ ಮೆಡಿಸಿನ್ ಹುದ್ದೆಯು ನೇಮಕಾತಿಯಿಂದ/ ವರ್ಗಾವಣೆಯಿಂದ ಭರ್ತಿ ಆಗುವವವರೆಗೆ ಜಾರಿಯಲ್ಲಿರುವಂತೆ ಮಾಡಲಾಗಿದೆ. ಈ ಹುದ್ದೆಯು ಮೇಲ್ಕಂಡ ಕಾರಣಗಳಿಂದ ಭರ್ತಿಯಾದಲ್ಲಿ ಈ ಆದೇಶವು ಸ್ವತಃ ರದ್ದಾಗುವುದು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣ ಅಧಿಕಾರಿಗಳು, ಶಿವಮೊಗ್ಗ

ಗೆ,
ಆಡಳಿತ ವೈದ್ಯಾಧಿಕಾರಿಗಳು, ವೈದ್ಯಾಧಿಕಾರಿಗಳು,
ಪ್ರಾಥಮಿಕ ಆರೋಗ್ಯ ಕೇಂದ್ರ ಶಿರವಂತೆ,
ಸಾಗರ ತಾಲ್ಲೂಕು

ಪ್ರತಿಯನ್ನು:
1) ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ ಸೊರಬ ಇವರ ಮಾಹಿತಿಗಾಗಿ
2) ಆಡಳಿತ ವೈದ್ಯಾಧಿಕಾರಿಗಳು, ಸಮುದಾಯ ಆರೋಗ್ಯ ಕೇಂದ್ರ ಆನಂದಪುರ ಸಾಗರ ತಾಲ್ಲೂಕು
3) ತಾಲ್ಲೂಕು ಆರೋಗ್ಯಾಧಿಕಾರಿಗಳು ಸಾಗರ/ಸೊರಬ
4) ಜಿಲ್ಲಾ ಆರ್ ಸಿ ಹೆಚ್ ಅಧಿಕಾರಿಗಳು, ಶಿವಮೊಗ್ಗ ಇವರ ಮಾಹಿತಿಗಾಗಿ ಸಲ್ಲಿಸಿದೆ

Scanned with OKEN Scanner